# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 836 (728) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |
| ಉತ್ತರಿಸುವ ದಿನಾಂಕ | : | 20.09.2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಉದ್ಯಮಿಯಾಗು, ಉದ್ಯೋಗ ನೀಡುವ ಯೋಜನೆಯನ್ನು ಸರ್ಕಾರ ಯಾವಾಗ ಜಾರಿಗೆ ತಂದಿದೆ; | 2021-22ನೇ ಸಾಲಿನಿಂದ ಜಾರಿಗೆ ತಂದಿದೆ. |
| (ಆ) | ಈ ಯೋಜನ ಅಡಿಯಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವಾಗ ಕಾರ್ಯಕ್ರಮಗಳು ನಡೆದಿವೆ; (ಕಾರ್ಯಕ್ರಮದ ಪೂರ್ಣ ವಿವರ ಒದಗಿಸುವುದು) | ಸದರಿ ಕಾರ್ಯಕ್ರಮವನ್ನು ಆರು ವಿಭಾಗೀಯ ಕೇಂದ್ರ ಸ್ಥಾನಗಳಲ್ಲಿ ಆಯಾ ಸಂಬಂಧಪಟ್ಟ ಜಿಲ್ಲೆಗಳನ್ನು ಒಳಗೊಂಡಂತೆ ನಡೆಸಲಾಗಿದೆ.<br>ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| (ಇ) | ಈ ಯೋಜನೆಯಿಂದ ಎಷ್ಟು ಜನ ರಾಜ್ಯದಲ್ಲಿ ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಸದರಿ ಕಾರ್ಯಕ್ರಮವನ್ನು 2021-22ನೇ ಸಾಲಿನಲ್ಲಿ ಭಾವೀ ಉದ್ಯಮಿದಾರರು, ಪದವಿ ಇಂಜಿನಿಯರಿಂಗ್, ಎಂಬಿಎ, ಡಿಪ್ಲೋಮೊ ಮುಂತಾದ ವೃತ್ತಿಪರ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 31,768 ಅಭ್ಯರ್ಥಿಗಳು ಭಾಗವಹಿಸಿ ಉದ್ಯಮಗಳನ್ನು ಪ್ರಾರಂಭಿಸಲು ಪ್ರೇರಣೆ ಹೊಂದಿರುತ್ತಾರೆ.<br>ಜಿಲ್ಲೆಗಳಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br>ಈ ಕಾರ್ಯಕ್ರಮವನ್ನು ಹೊಸದಾಗಿ ಇತ್ತೀಚೆಗೆ ಆಯೋಜಿಸಲಾಗಿದ್ದು, ಸ್ವಂತ ಉದ್ಯಮ ಸ್ಥಾಪಿಸಲು ಪ್ರೇರೇಪಿಸಲಾಗುತ್ತಿದೆ. |
| (ಈ) | ಸದರಿ ಯೋಜನೆಯಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ? (ವಿವರ ಒದಗಿಸುವುದು) | ಮೊದಲ ಹಂತದಲ್ಲಿ ಪ್ರೇರಣ / ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.<br>ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಇರುವ ಅವಕಾಶಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆ.<br>ವಿವಿಧ ಇಲಾಖೆಗಳ ಯೋಜನೆಗಳ ಬಗ್ಗೆ ಹಾಗೂ ವಿವಿಧ ಕ್ಷೇತ್ರಗಳಾದ ಆಹಾರ, ಟೆಕ್ಸ್ ಟೈಲ್, ಇಂಜಿನಿಯರಿಂಗ್, ಐಟಿ ಬಿಟಿ, ಟೂರಿಸಂ ಇತ್ಯಾದಿ ವಿಷಯಗಳಲ್ಲಿ ಪರಿಣಿತರಿಂದ ಮಾಹಿತಿ ಒದಗಿಸಲಾಗಿದೆ.<br>ಉದ್ಯಮಿಯಾಗಲು ಬಯಸುವವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಮೂಲಕ ಘಟಕ ಪ್ರಾರಂಭಿಸಲು ಪ್ರೋತ್ಸಾಹಿಸಲಾಗುತ್ತದೆ. |

ಸಿಐ 298 ಎಸ್‌ಪಿಐ 2022

(ಡಾ. ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಅನುಬಂಧ-1

ಕರ್ನಾಟಕ ರಾಜ್ಯದಲ್ಲಿ ಉದ್ಯಮಿಯಾಗು, ಉದ್ಯೋಗ ನೀಡು ಕಾರ್ಯಕ್ರಮಗಳ ವಿವರ

| ಕಾರ್ಯಕ್ರಮ ಆಯೋಜಿಸಲಾದ ಜಿಲ್ಲಾ ಕೇಂದ್ರ (ಕಂದಾಯ ವಿಭಾಗ) | ಕಾರ್ಯಕ್ರಮ ಆಯೋಜಿಸಿದ ದಿನಾಂಕ | ಕಾರ್ಯಕ್ರಮ ನಡೆದ ಸ್ಥಳ |
|---|---|---|
| **ಬೆಂಗಳೂರು-1**<br>(ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗೊಳಗೊಂಡಂತೆ) | 11.10.2021 | ಅರಮನೆ ಮೈದಾನ, ಬೆಂಗಳೂರು |
| **ಕಲಬುರಗಿ**<br>(ಬಳ್ಳಾರಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರ, ಯಾದಗಿರಿ, ವಿಜಯನಗರ ಜಿಲ್ಲೆಗೊಳಗೊಂಡಂತೆ) | 03.01.2022 | ಡಾ॥ ಬಿ. ಆರ್. ಅಂಬೇಡ್ಕರ್ ಭವನ, ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರಗಿ |
| **ಮೈಸೂರು**<br>(ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಗೊಳಗೊಂಡಂತೆ) | 08.04.2022 | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ಭವನ, ವಿಟಿಯು, ಬೆಳಗಾವಿ |
| **ಬೆಳಗಾವಿ**<br>(ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗೊಳಗೊಂಡಂತೆ) | 28.04.2022 | ಕಾನ್ವೋಕೇಷನ್ ಭವನ, ಕೆ.ಎಸ್.ಒ.ಯು. ಮೈಸೂರು |
| **ಕರಾವಳಿ ಪ್ರದೇಶ**<br>(ದಕ್ಷಿಣ ಕನ್ನಡ, ಉಡುಪಿ) | 12.05.2022 | ಟಿ.ಎಂಎಪೈ ಇಂಟರ್ ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಮಂಗಳೂರು |
| **ಬೆಂಗಳೂರು - 2**<br>(ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗೊಳಗೊಂಡಂತೆ) | 23.06.2022 | ಗಂಗಾಧರಯ್ಯ ಮೆಮೋರಿಯಲ್ ಹಾಲ್, ಗುಬ್ಬಿ ರಸ್ತೆ, ತುಮಕೂರು |

ಅನುಬಂಧ-2

ಕರ್ನಾಟಕ ರಾಜ್ಯದಲ್ಲಿ ಉದ್ಯಮಿಯಾಗು, ಉದ್ಯೋಗ ನೀಡು ಕಾರ್ಯಕ್ರಮಗಳ ವಿವರ

| ಕಾರ್ಯಕ್ರಮ ಆಯೋಜಿಸಲಾದ ಜಿಲ್ಲಾ ಕೇಂದ್ರ (ಕಂದಾಯ ವಿಭಾಗದ ಅನ್ವಯ) | ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ (ಸುಮಾರು) |
|---|---|
| **ಬೆಂಗಳೂರು-1**<br>(ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗೊಳಗೊಂಡಂತೆ) | 6000 |
| **ಕಲಬುರಗಿ**<br>(ಬಳ್ಳಾರಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರ, ಯಾದಗಿರಿ, ವಿಜಯನಗರ ಜಿಲ್ಲೆಗೊಳಗೊಂಡಂತೆ) | 4968 |
| **ಮೈಸೂರು**<br>(ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಗೊಳಗೊಂಡಂತೆ) | 6100 |
| **ಬೆಳಗಾವಿ**<br>(ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗೊಳಗೊಂಡಂತೆ) | 5200 |
| **ಕರಾವಳಿ ಪ್ರದೇಶ**<br>(ದಕ್ಷಿಣ ಕನ್ನಡ, ಉಡುಪಿ) | 6000 |
| **ಬೆಂಗಳೂರು - 2**<br>(ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗೊಳಗೊಂಡಂತೆ) | 3500 |
| **ಒಟ್ಟು** | **31,768** |